

# ಲಿಟಲ್ ಏಂಜಲ್!

ಪ್ರವೀಣ ಕುಲಕರ್ಣಿ

ಪಂಜಾಬ್‌ನಿಂದ ಹೋಗಿ ಆಸ್ಟ್ರೇಲಿಯಾದಲ್ಲಿ ನೆಲೆ ನಿಂತಿರುವ ಸಿಖ್ ಕುಟುಂಬದ ಈ ಪೋರಿ, ಜಗತ್ತಿನ ಎಲ್ಲ ಮಕ್ಕಳಿಗೂ ಸ್ಫೂರ್ತಿಯ ಸೆಲೆ. ಹನ್ನೊಂದರ ಹರೆಯದಲ್ಲೇ ‘ಸೆವೆಂಟೀನ್ ಸ್ಟೋರೀಸ್’ (17 Stories) ಎಂಬ ಮಕ್ಕಳ ಕಥಾ ಸಂಕಲನವನ್ನು ಹೊರತಂದಿರುವ ಅವಳಿಗೆ (ಈಗ ಅವಳಿಗೆ ಹನ್ನೆರಡು ವರ್ಷ) ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದೆಂದರೆ ಪಂಚಪ್ರಾಣ. ಬರೀ ಕಥೆಗಳನ್ನು ಬರೆದಿದ್ದಾದರೆ ಈ ಹುಡುಗಿಯ ಕುರಿತು ಬಹುತೇಕರು ಮೆಚ್ಚುಗೆ ಸೂಚಿಸಿ, ಸುಮ್ಮನಾಗಿ ಬಿಡುತ್ತಿದ್ದರೋ ಏನೋ. ಆದರೆ, ಅವಳು ತನ್ನ ಕಥಾಪುಸ್ತಕ ಹೊರತಂದದ್ದು ಕೂಡ ವಿಶಿಷ್ಟ ಸಾಧನೆಯ ಮೂಲಕ. ಅಲ್ಲದೆ, ಪುಸ್ತಕ ಮಾರಾಟದಿಂದ ಬಂದ ವರಮಾನವನ್ನು ಉದಾತ್ತ ಕಾರಣಕ್ಕಾಗಿ ವಿನಿಯೋಗ ಮಾಡುತ್ತಿದ್ದಾಳೆ. ಹೀಗಾಗಿ ಅಶ್ಲೀನ್ ಖೇಲಾ ಎಂದರೆ ಸಾಹಿತ್ಯಲೋಕದ ಮಂದಿಗೆ ಮಾತ್ರವಲ್ಲ, ಇತರ ಕ್ಷೇತ್ರದಲ್ಲಿ ತೊಡಗಿದವರಿಗೂ ಹೆಮ್ಮೆ.

ಹಾಗಾದರೆ ಅಶ್ಲೀನ್ ಮಾಡಿದ ಸಾಧನೆ ಏನು ಅಂತೀರಾ? ಅವಳ ತಂದೆ–ತಾಯಿ ಪುಸ್ತಕದ ಮುದ್ರಣಕ್ಕೆ ಬೇಕಾದಷ್ಟು ಖರ್ಚು ಮಾಡಲು ಶಕ್ತರಿದ್ದರೂ ಸಿದ್ಧರಿದ್ದರೂ ಅವರಿಂದ ಹಣ ಪಡೆಯದೆ ತಾನೇ ಪರಿಶ್ರಮ ಹಾಕಿ ಮುದ್ರಣದ ವೆಚ್ಚವನ್ನು ಗಳಿಸಿದ್ದಾಳೆ. ಎರಡು ವರ್ಷಗಳವರೆಗೆ ಪ್ರತೀ ವಾರಾಂತ್ಯದಲ್ಲಿ ರಸ್ತೆಬದಿ ಬಿದ್ದ ಪ್ಲಾಸ್ಟಿಕ್ ಹಾಗೂ ಗಾಜಿನ ಬಾಟಲ್‌ಗಳನ್ನು ಸಂಗ್ರಹಿಸಿ, ಮರುಬಳಕೆ ಕೇಂದ್ರಕ್ಕೆ ಕೊಟ್ಟು ಸಂಪಾದನೆ ಮಾಡಿದ್ದಾಳೆ. ಪರಿಸರ ಸಂರಕ್ಷಣೆಗೂ ಅಳಿಲು ಸೇವೆ ಸಲ್ಲಿಸಿದ್ದಾಳೆ. ಆ ಹಣವೂ ಸಾಲದು ಎಂಬ ಮಾಹಿತಿ ಸಿಕ್ಕಮೇಲೆ ತನ್ನ ಮನೆಯ ಹಿತ್ತಲಲ್ಲಿ ವಿವಿಧ ಹಣ್ಣುಗಳ ಸಸಿಗಳನ್ನು ಬೆಳೆಸಿ, ಆನ್‌ಲೈನ್ ಮೂಲಕ ಮಾರಾಟ ಮಾಡಿದ್ದಾಳೆ. ಕೊನೆಗೆ ಪುಸ್ತಕ ಕಳಿಸಲು ಅಂಚೆವೆಚ್ಚಕ್ಕೆ ಹಣ ಕಡಿಮೆ ಬಿದ್ದಾಗ ತನ್ನ ಹಣ ಸಂಗ್ರಹದ ಡಬ್ಬಿ ತೆರೆದು ಅದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದಾಳೆ. ತನ್ನ ಪುಸ್ತಕ ಮಾರಾಟದಿಂದ ಬಂದ ಎಲ್ಲ ವರಮಾನವನ್ನು ಆಕೆ ಕ್ಯಾನ್ಸರ್ ಕೌನ್ಸಿಲ್ ಹಾಗೂ ಅನಾಥ ಮಕ್ಕಳ ಕಲ್ಯಾಣ ಟ್ರಸ್ಟ್‌ಗೆ ದೇಣಿಗೆ ನೀಡುತ್ತಿದ್ದಾಳೆ. ‘ನಿನಗೆ ಏನಾದರೂ ಬೇಕಾದರೆ ತೆಗೆದುಕೊ’ ಎಂದು ಅಪ್ಪ–ಅಮ್ಮ ಹೇಳಿದರೆ, ಅನಾಥ ಮಕ್ಕಳಿಗೆ ಈ ಹಣ ಖರ್ಚಾಗಲಿ ಎನ್ನುವ ಮೂಲಕ ಹೃದಯ ವೈಶಾಲ್ಯ ಮೆರೆದಿದ್ದಾಳೆ. ಪುಟ್ಟ ಮಗುವಾಗಿದ್ದ ದಿನಗಳಿಂದಲೂ ಅಜ್ಜ–ಅಜ್ಜಿ ಹೇಳುತ್ತಿದ್ದ ಕಥೆಗಳು ಅವಳ ಮೇಲೆ ಅಷ್ಟೊಂದು ಪ್ರಭಾವ ಬೀರಿವೆಯಂತೆ!

‘ದೊಡ್ಡವಳಾದ ಮೇಲೆ ಏನು ಮಾಡುತ್ತಿ ಅಮ್ಮಾ’ ಎಂದು ಆಕೆಯನ್ನು ಪ್ರಶ್ನಿಸಿದರೆ, ‘ಬರೆಯುವುದಂತೂ ಇದ್ದೇ ಇದೆ. ವೈದ್ಯೆಯಾಗುವ ಆಸೆ ಇದೆ. ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ ಹಾಗೂ ಪರಿಸರದ ಸಂರಕ್ಷಣೆ ಕ್ಷೇತ್ರಗಳಲ್ಲಿ ಸ್ವಯಂಸೇವಕಿಯಾಗಿ ಕೆಲಸ ಮಾಡುವ ಮನಸ್ಸಿದೆ’ ಎಂದು ಉತ್ತರಿಸುತ್ತಾಳೆ. ಚಿಕ್ಕ ವಯಸ್ಸಿನಲ್ಲೇ ಕಥೆಗಾರ್ತಿಯಾಗಿ ಹೆಸರು ಮಾಡಿರುವ ಅಶ್ಲೀನ್‌ಗೆ ಆಸ್ಟ್ರೇಲಿಯಾದ ಪ್ರತಿಷ್ಠಿತ ‘ನ್ಯೂ ಸೌತ್ ವೇಲ್ಸ್ ವುಮನ್ ಆಫ್ ದಿ ಇಯರ್’ ಪ್ರಶಸ್ತಿ ಕೂಡ ಸಂದಿದೆ. ಈ ಪ್ರಶಸ್ತಿಗೆ ಪಾತ್ರವಾದ ಅತ್ಯಂತ ಕಿರಿಯ ವಯಸ್ಸಿನ ಸಾಧಕಿ ಎಂಬ ಹಿರಿಮೆಗೂ ಅವಳು ಪಾತ್ರಳಾಗಿದ್ದಾಳೆ. ‘ಒಬ್ಬ ಬಾಲಕಿಯಾಗಿ ಅಶ್ಲೀನ್ ಮಾಡಿರುವ ಸಾಧನೆ ನಮಗೆಲ್ಲ ಹೆಮ್ಮೆ ತಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅವಳು ಹೆಜ್ಜೆ ಗುರುತು ಮೂಡಿಸಿದ್ದು, ಗಳಿಸಿದ ಆದಾಯವನ್ನು ಸಮಾಜಕ್ಕೆ ಅರ್ಪಿಸುತ್ತಿರುವುದು ಇತರರಿಗೂ ಮಾದರಿಯಾಗಿದೆ. ನಿಸ್ಸಂಶಯವಾಗಿ ಈ ಹುಡುಗಿ ಸಮಾಜ ಪರಿವರ್ತನೆಯ ಹರಿಕಾರರಲ್ಲಿ ಒಬ್ಬಳಾಗಿದ್ದಾಳೆ’ ಎಂದು ಪ್ರಶಸ್ತಿ ಆಯ್ಕೆ ಸಮಿತಿ ಈ ಪುಟಾಣಿ ಸಾಹಿತಿಯನ್ನು ಮುಕ್ತಕಂಠದಿಂದ ಪ್ರಶಂಸಿಸಿದೆ. ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನ ಗವರ್ನರ್ ಮಾರ್ಗರೇಟ್ ಬೀಜಲಿ ಅವರು ಅಶ್ಲೀನ್‌ಗೆ ಸಿಡ್ನಿಯ ಸರ್ಕಾರಿ ಭವನದಲ್ಲಿ ಆತಿಥ್ಯ ನೀಡಿ ಗೌರವಿಸಿದ್ದಾರೆ.

ಅಶ್ಲೀನ್ ಪುಟ್ಟ ಹೃದಯ ಮಾನವೀಯತೆಯಿಂದ ಮಿಡಿಯುತ್ತಿದೆ. ರಸ್ತೆಬದಿಯಲ್ಲಿ ಆಡುವ, ಅಪ್ಪ–ಅಮ್ಮ ತರುವ ಊಟಕ್ಕಾಗಿ ಕಾಯುವ ವಲಸೆ ಕಾರ್ಮಿಕರ ಮಕ್ಕಳಿಗೂ ಆಕೆ ಸಹಾಯಹಸ್ತ ಚಾಚಿದ್ದಾಳೆ. ತನ್ನ ಮಿತಿಯಲ್ಲಿ ಕುಟುಂಬದ ಹಿರಿಯರ ಮನವೊಲಿಸಿ ಅಂತಹ ಮಕ್ಕಳಿಗೆ ಊಟ–ಬಟ್ಟೆ ವಿತರಿಸುವ ಕೆಲಸ ಮಾಡಿದ್ದಾಳೆ. ‘ಸೆವೆಂಟೀನ್ ಸ್ಟೋರೀಸ್’ ಕೃತಿ ಭಾರತ, ಆಸ್ಟ್ರೇಲಿಯಾ ಮಾತ್ರವಲ್ಲದೆ ಜಗತ್ತಿನ ಹಲವು ದೇಶಗಳಲ್ಲಿ ಭಾರಿ ಬೇಡಿಕೆ ಗಿಟ್ಟಿಸಿದೆ. ಒಂದೊಂದು ಪ್ರತಿ ಮಾರಾಟವಾದಾಗಲೂ ದುರ್ಬಲರ ನೆರವಿಗೆ ಇನ್ನು ಸ್ವಲ್ಪ ದುಡ್ಡು ಸಿಕ್ಕಿತು ಎಂದು ಆಕೆ ಖುಷಿಪಡುತ್ತಾಳೆ. ಇದೀಗ ‘ಜರ್ನಿ ಥ್ರೂ ಹರ್ ಜರ್ನಿ’ ಎಂಬ ಇನ್ನೊಂದು ಕೃತಿಯನ್ನೂ ಆಕೆ ರಚಿಸಿದ್ದಾಳೆ. ಆದರೆ, ಅವಳ ಕಥಾ ಸಂಕಲನವೇ ಹೆಚ್ಚಿನ ಬೇಡಿಕೆ ಗಿಟ್ಟಿಸಿದೆ. ಯುನಿಸೆಫ್, ಕ್ಯಾನ್ಸರ್ ಕೌನ್ಸಿಲ್ ಮತ್ತಿತರ ಸಂಘಟನೆಗಳ ಮೂಲಕ ಬಡಮಕ್ಕಳಿಗೆ ಲ್ಯಾಪ್‌ಟಾಪ್, ಬಟ್ಟೆ, ಶೂ, ಪುಸ್ತಕ, ಪೌಷ್ಟಿಕಾಂಶಯುಕ್ತ ಆಹಾರ ವಿತರಣೆಯ ಕೆಲಸವನ್ನೂ ಮಾಡುತ್ತಿದ್ದಾಳೆ. ತನ್ನಂತೆಯೇ ನೊಂದವರ ಕಣ್ಣೀರು ಒರೆಸುವ ಕೆಲಸವನ್ನು ಎಲ್ಲಾ ಉಳ್ಳವರು ತಮ್ಮ ಸುತ್ತಲಿನ ಪರಿಸರದಲ್ಲಿ ಮಾಡುತ್ತಾ ಹೋದರೆ ಈ ಜಗತ್ತಿನಲ್ಲಿ ಬಡತನ ಎನ್ನುವುದೇ ಇರುವುದಿಲ್ಲ. ಅದು ಪೆಡಂಭೂತವಾಗಿ ಕಾಡುವುದೂ ಇಲ್ಲ ಎನ್ನುವ ಈ ಹುಡುಗಿ, ಇಡೀ ಜಗತ್ತಿಗೆ ಮಾನವೀಯತೆಯ ಪಾಠ ಮಾಡುತ್ತಿರುವಂತೆ ಗೋಚರವಾಗುತ್ತದೆ. ಆಸ್ಟ್ರೇಲಿಯಾ ಸಾಹಿತ್ಯ ಲೋಕವಂತೂ ಈಕೆಯನ್ನು ‘ಲಿಟಲ್ ಏಂಜಲ್’ ಎಂದೇ ಕರೆಯುತ್ತದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65